**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No.277/2022**

ಪಿ**.**ಡಬ್ಲ್ಯೂ**. 1**

ದಿನಾಂಕಃ **30.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ನ್ಯಾಯಾಲಯದ ಅನುಮತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ**.** ಜಿ**.**ಆರ್**.** ವಕೀಲರಿಂದ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು**.**

| | |
|---|---|
| ನಿ.ಪಿ.18 | ದಿ.30.10.2021 ರಂದು ಕಲಂ.64 ಕಾಯ್ದೆ 2013 ರ ಅಡಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಂದೆ ಅರ್ಜಿದಾರರು ಸಲ್ಲಿಸಿದ ಅರ್ಜಿ |
| ನಿ.ಪಿ.19 | ವಿಶೇಷ ಭೂ ಸ್ವಾಧೀನಾಧಿಕಾರಿಗಳು ಅರ್ಜಿ ಸ್ವೀಕರಿಸಿದ ದಿನಾಂಕ 30.10.2021 ರ ಮೊಹರು ಇರುವ ಇಂಡೆಕ್ಸ್ ಫಾರಂ. |

ಪಾಟೀ ಸವಾಲು ಃ **1** ಮತ್ತು **2** ನೇ ಎದುರುದಾರರ ಪರವಾಗಿ ಶ್ರೀ**.** ಸಿ**.**ಎಂ ವಕೀಲರಿಂದ

1. ನಿ.ಪಿ.18 ನ್ನು ನಾನು 1 ನೇ ಎದುರುದಾರರ ಕಚೇರಿಯಲ್ಲಿ ಕಾಲಮಿತಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಾಲಮಿತಿಯಲ್ಲಿ ಅರ್ಜಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

2. ಸರ್ವೇ ನಂ.24/14 ಮತ್ತು 24/19 ಸ್ವಾಧೀನವಾದ ಜಮೀನಿಗೂ ಮಧುಗಿರಿ ಪಟ್ಟಣಕ್ಕೂ 10 ರಿಂದ 14 ಕಿ.ಮೀ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 8 ಕಿ.ಮೀ ಅಂತರ ಇದೆ ಎಂದು ನುಡಿದಿರುತ್ತಾರೆ. ಸದರಿ ಜಮೀನಿಗೆ ಜಿಲ್ಲಾ ರಸ್ತೆ, ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡತೆ ಇಲ್ಲ ಸಾಕ್ಷಿ ಕಾಲು ದಾರಿ ಇದೆ ಎಂದು ನುಡಿದಿರುತ್ತಾರೆ. 1 ಗುಂಟೆಗೆ 40 ಸಾವಿರ ಮಾರುಕಟ್ಟೆ ಮೌಲ್ಯ ಇಲ್ಲ ಎಂದರೆ ಸರಿಯಲ್ಲ. ಜಮೀನು ಸ್ವಾಧೀನಪಡಿಸಿಕೊಳ್ಳುವ ವೇಳೆ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ರೈಲ್ವೆ ಇಲಾಖೆ, ಅರಣ್ಯ ಇಲಾಖೆ ಅಧಿಕಾರಿಗಳು, ನೊಂದಾವಣಾ ಕಛೇರಿಯ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿ ಮರವಳಿಗಳಿಗೆ ಮತ್ತು ಭೂಮಿಗೆ ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ನಿಗಧಿಪಡಿಸಿದ್ದರು ಎಂದರೆ ಸರಿಯಲ್ಲ. ಸ್ವಾಧೀನವಾದ ಜಮೀನಿಂದ ಒಟ್ಟು ರೂ.46,15,000/- ಪರಿಹಾರದ ಹಣ ಪಾವತಿ ಮಾಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿದ್ದ ಒಂದು ಬಾವಿಗೆ 20 ಲಕ್ಷ ಮೌಲ್ಯ ಇತ್ತು ಎಂದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಪ್ ಹೌ ಸ್ ಮೌಲ್ಯ 1 ಲಕ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಾವತಿ ಮಾಡಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ **3** ನೇ ಎದುರುದಾರರ ಪರವಾಗಿ ಶ್ರೀ**.** ಡಿಜಿಪಿ ವಕೀಲರಿಂದ

3. ನನ್ನ ಜಮೀನಿಗೂ ಮದುಗಿರ ಪಟ್ಟಣಕ್ಕೂ ಎಷ್ಟು ಕಿ.ಮೀ ಅಂತರ ಇರುತ್ತದೆ ಎಂದು ದಾಖಲಾತಿ ಹಾಜರುಪಡಿಸಿದ್ದೇನೆ. ನಾನು ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನವಾದ ಜಮೀನಿನಲ್ಲಿ ವಾಣಿಜ್ಯ ಬೆಳೆಗಳಿಂದ 4 ಲಕ್ಷ ಸಂಪಾದನೆ ಮಾಡುತ್ತಿದ್ದ ಎಂದು ದಾಖಲಾತಿ ಹಾಜರುಪಡಿಸಿಲ್ಲ. 1 ಎಕರೆಗೆ 16 ಲಕ್ಷ ಮಾರುಕಟ್ಟೆ ಮೌಲ್ಯ ಇರುವ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ನನ್ನ ಪ್ರಮಾಣಪತ್ರದಲ್ಲಿ ನಮೂದು ಮಾಡಿರುವ ಮರಗಳಿಗೆ ನಾನು ಕೋರಿರುವ ಪರಿಹಾರಕ್ಕೆ ಸಂಬಂಧಿಸಿದಂತೆ ದಾಖಲಾತಿ ಹಾಜರುಪಡಿಸಿದ್ದೇನೆ. ಸ್ವಾಧೀನವಾದ ಜಮೀನಿನಲ್ಲಿ ಅಡಿಕೆ ಮರಗಳು ಇರಲಿಲ್ಲ ಅಡಿಕೆ ಗಿಡಗಳು ಮಾತ್ರ ಇತ್ತು ಎಂದರೆ ಸರಿಯಲ್ಲ. ನಾನು ಅಡಿಕೆ ಗಿಡಗಳಿಗೆ, ಅಡಿಕೆ ಮರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾವಿ ತೋಡಿಸುವ ವೆಚ್ಚಕ್ಕೆ ಸಂಬಂಧಿಸಿದಂತೆ ದಾಖಲಾತಿ ಹಾಜರುಪಡಿಸಿಲ್ಲ.

4. ಸ್ವಾದೀನವಾದ ಜಮೀನು ಮಿಡಿಗೇಶಿ ಹೋಬಳಿ ಮದುಗಿರಿ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ನಿ.ಪಿ.15 ಕುಚ್ಚಂಗಿ ಗ್ರಾಮಕ್ಕೆ ಸಂಬಂಧಿಸಿದ ದಾಖಲಾತಿ ಎಂದರೆ ಸರಿ. ಕುಚ್ಚಂಗಿಯಿಂದ ನಮ್ಮ ಗ್ರಾಮಕ್ಕೆ 70 ಕಿ.ಮೀ ಅಂತರ ಇದೆ. ಹೊಸಕೆರೆ ಗ್ರಾಮಕ್ಕೂ ಮತ್ತು ನಮ್ಮ ಗ್ರಾಮ

ಕ್ಕೂ 8 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿ 2 ಕಿ.ಮೀ ಅಂತರ ಇದೆ ಎಂದು ನುಡಿದಿರುತ್ತಾರೆ. ಸದರಿ ಗ್ರಾಮಗಳ ಅಂತರಕ್ಕೆ ಸಂಬಂಧಿಸಿದಂತೆ ನಕ್ಷೆ ಹಾಜರುಪಡಿಸಿಲ್ಲ. ನಿ.ಪಿ.16 ಮತ್ತು 17 ಹೊಸಕೆರೆ ಗ್ರಾಮಕ್ಕೆ ಸಂಬಂಧಿಸಿದ ಕ್ರಯ ಪತ್ರ ಎಂದರೆ ಸರಿ. ಹೊಸಕೆರೆ ಗ್ರಾಮದಲ್ಲಿ ಶಾಲೆ, ಬ್ಯಾಂಕ್ ವಾಣಿಜ್ಯ ಕಟ್ಟಡಗಳು ಇರುತ್ತದೆ. ನಿ.ಪಿ.17 ರ ಜಮೀನು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತ ಜಮೀನು ಎಂದರೆ ಗೊತ್ತಿಲ್ಲ. ನಿ.ಪಿ.16 ಮತ್ತು 17 ನಮ್ಮ ಗ್ರಾಮಕ್ಕೆ ಸಂಬಂಧಿಸಿದೇ ಇರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಪಾವತಿಸಿದ್ದರೂ ನಾನು ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.15 ರ ಆದೇಶದ ಸ್ವಾಧೀನವಾಗಿರುವಜಮೀನು ಮತ್ತು ನನ್ನ ಜಮೀನು ಒಂದೇ ನೋಟೀಫಿಕೇಷನ್ ಅನ್ವಯ ಸ್ವಾಧೀನವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು